ಭಾಗದಲ್ಲಿ ಇಲಿಗಳು ಪೂರಾ ಹೆಚ್ಚಾದವು. 'ಬೊಮ್ಮನಹಳ್ಳಿಯ ಇಲಿಗಳಂತೆ' ಬರ ಬಂದರೂ ಕದ್ದು ತಿನ್ನುವ ರೂಢಿ ಇರುವ ಇಲಿಗಳಿಗೆ ಕಳ್ಳತನ ತಪ್ಪು ಎಂದು ಹೇಗೆ ಗೊತ್ತಾಗಬೇಕು. ಗೊತ್ತಿರುವ ಮಾನವರು ಬಹಿರಂಗವಾಗಿಯೇ ಕಳ್ಳತನ ಮಾಡುತ್ತಿದ್ದಾರಲ್ಲ! ಮನೆಯ ಇಲಿಗೂ ಬೆಟ್ಟದ ಇಲಿಗೂ ಹೇಗೋ ಏನೋ ಹೊತ್ತೊತ್ತಿಗೂ ಅನ್ನ ಸಿಗುವಂತೆ ಮಾಡಿರುವ ಜೀವ ಸೃಷ್ಟಿಯ ವಿಸ್ಮಯ ಹೇಳತೀರದು. ಊರ ತುಂಬಾ ಇಲಿಗಳೇ. ಇಲಿ ಹೆಗ್ಗಣಗಳು ತುಂಬಾ ಶ್ರಮಜೀವಿಗಳು. ಒಂದು ರಾತ್ರಿ ನಿದ್ದೆಗೆಟ್ಟರೆ ಮಾರುದ್ದ ಬಿಲ ತೋಡುವ ಅವುಗಳ ಸಾಹಸ ದೊಡ್ಡದು. ಒಂದು ದಿನ ಮಾಯದ ಮಳೆ ಬಂತು. ಆ ದಿನ ಮರಿಯನಿಗೆ ತಮ್ಮ ಹೊಲದಲ್ಲಿ ಕೊರೆದಿದ್ದ ಮಾರುದ್ದದ ಬಿಲ ನೋಡಿ ಕಡಿಮೆ ಎಂದರೂ ಹತ್ತಾರು ಇಲಿಗಳ ದೊಡ್ಡ ಗುಂಪು ಎಂದು ಭಾವಿಸಿ ಅಗೆಯಲು ನಿರತನಾದ. ಅಗೆಯುತ್ತಾ ಒಂದು ಸಣ್ಣ ಬಾಲದ ತುಂಡು ಕಣ್ಣಿಗೆ ಕಾಣುತ್ತಲೇ ತನ್ನ ಮನಸ್ಸಿನಲ್ಲಿ ಅಂದುಕೊಂಡಿದ್ದು ಅದೇ ಎನ್ನುವಂತೆ ಆಯಿತು. ಬಿಲದ ಸುತ್ತ ಪಹರೆಯವರಂತೆ ಮಕ್ಕಳ ಜೊತೆ ನಿಂತು ಇಲಿ ಹೊರಬರುವುದನ್ನೇ ಕಣ್ಣಗಲಿಸಿ ನಾವೆಲ್ಲ ನೋಡುತ್ತಿದ್ದೆವು. ಏನು ಬಗೆ ಮಾಡಿದರೂ ಬಾಲ ಕೈಗೆ ಸಿಗದಂತಾಯ್ತು. ಇಂಥ ಮಹತ್ ಬೇಟೆ ತಪ್ಪಬಾರದೆಂದು ಕೈಯಿಂದ ಎಳೆದರೆ ಎಲ್ಲಿ ಜಾರಿ ತಪ್ಪಿಸಿಕೊಳ್ಳುತ್ತದೆಂದು ಬಾಲವನ್ನು ಹಲ್ಲಿನಿಂದ ಕಚ್ಚಿ ಎಳೆಯಲು ಬಾಯಿ ಹಾಕಿದ. ಎಷ್ಟು ಗಟ್ಟಿಯಾಗಿ ಹಿಡಿದಿತ್ತೆಂದರೆ ಬಾಲದ ಚರ್ಮವೇ ಬಾಯಿಗೆ ಅಂಟಿಕೊಂಡಿತು. ಇದು ಸರಿಯಾದ ದೊಡ್ಡ ಇಲಿಯೇ ಇರಬೇಕೆಂದು ನಿಂತಿದ್ದವರೆಲ್ಲ ಅವಾಕ್ಕಾದರು. ಏನೇ ಆಗಲಿ ಬಿಡಬಾರದು ಎಂದು ಮತ್ತೆ ಪ್ರಯತ್ನಪಟ್ಟ ದೇಹದ ಹಸಿವನ್ನು ನಾಲಗೆಗೆ ತಂದುಕೊಂಡಂತೆ ಮತ್ತಷ್ಟು ಬಗೆ ಮಾಡಿ ಮುಖ ತೂರಿಸಿ ಬಾಲವನ್ನೇ ನುಂಗುವಂತೆ ಬಲವಾಗಿ ಕಚ್ಚಿ ಎಳೆದ. ಎಳೆದ ರಭಸಕ್ಕೆ ಇಲಿಯ ಮೂತಿಯನ್ನು ಅರ್ಧ ನುಂಗಿದ ಹಾವು ಜೊತೆಯಲ್ಲಿಯೇ ಬಂತು. ಇದ ಕಂಡು ನಿಂತವರೆಲ್ಲ ಹಾವು ಎಂದು ಪೇರಿ ಕಿತ್ತರು. ನಾನು ಮತ್ತು ಜೊತೆಯಲ್ಲಿದ್ದವರೆಲ್ಲ ಗಾಬರಿಗೊಂಡು ಬಿದ್ದಂಬೀಳ ಓಡಿದೆವು. ಇಲಿಯು ಒದರಾಡದೆ ತನ್ನ ಬಾಯಿಯನ್ನು ಹಾವಿನ ಬಾಯಿಗೆ ಕೊಟ್ಟು ತನ್ನ ಶರೀರವನ್ನು ಕೊಂಚ ಅಲುಗಾಡಿಸುತ್ತಿತ್ತು. ಮರಿಯ ಬಿಲದ ಮೇಲೆಕ್ಕೆ ಬಂದು ಸರಿಯಾದ ದಡಿ ತೆಗೆದುಕೊಂಡು ಹಾವಿಗೆ ಒಂದು ಬಡಿದ. ಏಟು ತಿಂದ ಹಾವು ವಿಲವಿಲನೆ ಒದರಾಡಿ ಇಲಿಯನ್ನು ಬಿಟ್ಟು ಬೇಲಿ ಮರೆಯಲ್ಲಿ ಕ್ಷಣಾರ್ಧದಲ್ಲಿ ಮರೆಯಾಯಿತು. ಹಾವಿನ ಬಾಯಿಯಿಂದ ತಪ್ಪಿಸಿಕೊಂಡ ಇಲಿಯು ಅಷ್ಟೇನೂ ಲವಲವಿಕೆಯಿಂದ ಕಾಣುತ್ತಿರಲಿಲ್ಲ. ಗುಟುಕುಜೀವವಿದ್ದ ಆ ಇಲಿಯನ್ನು ಹಿಡಿದು ರಪ್ ಅಂತ ಒಗೆದ ಮರಿಯ 'ಪಕ್' ಅಂತ ಜೀವಬಿಟ್ಟಿತು. ತನ್ನ ಹಳೆ ಚೀಲಕ್ಕೆ ಇಲಿಯನ್ನು ತುಂಬಿಕೊಂಡು ಮುಂದೆ ಮುಂದೆ ಹೊರಟ. ದೂರದಲ್ಲಿ ಹೆದರಿಹೋದ ಹುಡುಗರನ್ನು ಕೂಗುತ್ತಾ 'ಬನ್ನಿರೋ ಬಡ್ಡಿ ಮಕ್ಕಳ' ಎಂದು ಇಲಿಗೆ ಹೆದರಿದರೆ ಹುಲಿ ಬಂದ್ರೆ ಏನ್ಮಾಡ್ತೀರಿ! ನಿಮಗೆ ಧೈರ್ಯ ಇರಬೇಕು. ಗುಂಡಿಗೆ ಗಟ್ಟಿ ಮಾಡ್ಕೋಬೇಕು ಜೀವನವೇ ಒಂದು ಬೇಟೆ! ಎಂದು ಕೂಗುತ್ತಾ ಮುಂದೇ ಸಾಗಿದ. ನಾವೂ ಹೆಜ್ಜೆ ಹಾಕಿದೆವು.

ಕಾಡು ಪಹರೆಯೊಳಗೆ ಯಾವ್ಯಾವ ಜಾಗದಲ್ಲಿ ಇಲಿಗಳು ಸಾಕಷ್ಟು ಸಿಗುತ್ತವೆ ಎಂಬುದನ್ನು ಕಾಡುಮೇಡು ತಿರುಗಿ ಚೆನ್ನಾಗಿ ಬಲ್ಲವನಾಗಿದ್ದ ಮರಿಯನನ್ನ 'ಶಿಕಾರಿ ಮರಿಯ' ಎಂದು ಕರೆಯುತ್ತಿದ್ದರು. ಮಂದೆ ಇಲಿ ಎಲ್ಲೆಲ್ಲಿ ವಾಸ ಮಾಡುತ್ತವೆ, ಕಾಡಿಲಿಗಳ ಚಲನವಲನವನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದ. ಯಾವುದೇ ಬೇಟೆಗೋದರೂ ಬರೀ ಕೈಯಲ್ಲಿ ಬರುವವನಲ್ಲ. ಕಾಲೆತ್ತು ಕಡೆದರೆ ಬೇಟೆ ಗ್ಯಾರಂಟಿ ಎನ್ನುವಷ್ಟು ಚಾಣಾಕ್ಷನೂ ಆಗಿದ್ದನು. ಇದನ್ನು ನೋಡಿದ ಬೇರೆ ಗುಂಪಿನ ಜನರು ಇವನನ್ನು ಕಂಡರೆ ಕರುಬುತ್ತಿದ್ದರು. ಕೆಲವರು ಇವನಿಗೆ 'ಹೊಲಸು ಗರಿ' ಇದೆಯೆಂದೂ ಅದಕ್ಕಾಗಿ ಇಲಿಗಳು ಸಿಗುತ್ತಿವೆ ಎಂದು ನಂಬುತ್ತಿದ್ದರು. ಇಲಿಗಳ ಜೀವ ಜೀವನವನ್ನು ಅರಿತವನಾಗಿದ್ದು ಅವುಗಳ ಸಂತಾನ ಆಹಾರಕ್ರಮ ಎಲ್ಲವೂ ಗೊತ್ತಿತ್ತು. ಇಷ್ಟಾದರೂ ಮರಿಯನಿಗೆ ಬೇಟೆಯಾಡುವಾಗ ಇಲಿ, ತೋಡ, ಮುಂಗುಸಿ ಕೈ ಬೆರಳನ್ನೇ ಕವರಿ ಗಾಯ ಮಾಡಿದ್ದುದು ಇದೆ. 'ಸಾಕಿದ ಗಿಣಿ ಕೈ ಕಚ್ಚುವಂತೆ' ಇದಕ್ಕೆಲ್ಲ ಎಂದೂ ಹೆದರದ ಮರಿಯ ಅವುಗಳಿಗೆಲ್ಲ ಸೊಪ್ಪು, ನಾರು, ಬೇರು ಔಷಧಿ ಮಾಡಿ ಹೇಗೋ ವಾಸಿಮಾಡಿಕೊಳ್ಳುತ್ತಿದ್ದ. ಒಟ್ಟಿನಲ್ಲಿ ಗಂಡಸು ಅಂದ್ರೆ ಮರಿಯ, ಇಲಿ ಮರಿಯ ಎನ್ನುವಂತಾಗಿತ್ತು.

ರಾತ್ರಿ ಹೊತ್ತಿನಲ್ಲಿ ಬೇಟೆಯಾಡುವುದು ಅಂದ್ರೆ ಗುಂಡಿಗೆ ಗಟ್ಟಿಯಾಗಿರಬೇಕು! ನಿಶಾಚರಿಗಳು ತಿರುಗುವ ಸಮಯ ಅಷ್ಟೇ ಅಲ್ಲ! ಕಲ್ಲು ನೀರು ಕರಗುವ ಸಮಯ! ದೆವ್ವ ದೈವ ಓಡಾಡುವ ಸಮಯ ಎಂದು ನಂಬುವ ಕಾಲವದು.

ಸುಗ್ಗಿ ಕಾಲದಲ್ಲಿ ಹುಲ್ಲು ಮೆದೆಗಳ ತೆನೆಯನ್ನು ಮೆದ್ದು ಚೆನ್ನಾಗಿ ಕೊಬ್ಬಿರುವ ಇಲಿಗಳನ್ನು ಹಣೆ ಬ್ಯಾಟರಿ ಹಿಡಿದು ಬೇಟೆಯಾಡುವುದೆಂದರೆ ಸಾಹಸ. ಕಾರಣ ಇಲಿಯನ್ನು ತಿನ್ನಲು ಬರುವ ಹಾವುಗಳು ಒಂದೊಂದು ಸಾರಿ ಬಲೆಗೆ ಬಿದ್ದು ದೊಡ್ಡ ಅನಾಹುತವೇ ಆಗಿರುವುದನ್ನು ಮರೆಯುವುದಿಲ್ಲ. ಊರ ಬಯಲಲ್ಲಿ ದೊಡ್ಡ ಅಂಕಣದ ಮೆದೆಗಳನ್ನು ಹುಡುಕಿ ರಾಗಿ ಹೊಕ್ಕಲು 'ಕಣ' ಮಾಡಿರುವ ಜಾಗವನ್ನೇ ಹುಡುಕುತ್ತಿದ್ದ ಮರಿಯ.

ಅಂದು ದನ ಮೇಯಿಸಿ ಬಂದ ಮರಿಯ ತನ್ನ ಸಂಗಡಿಗರಿಗೆ ಮೊದಲೇ ಸೂಚನೆ ಕೊಟ್ಟು ಬೇಗ ರಾತ್ರಿ ಊಟ ಮುಗಿಸಿ ಬಲೆ ಹಿಡಿದು ಹಣೆ ಬ್ಯಾಟರಿ ಹಾಕಿಕೊಂಡು ಐದಾರು ಜನರೊಂದಿಗೆ ಹೊರಟ. ಒಂದು ಸಣ್ಣದಾದ ಉದ್ದನೆಯ ಕೋಲನ್ನು ಹಿಡಿದು ಹತ್ತಾರು ಮೆದೆಗಳ ತಳಭಾಗದಲ್ಲಿ ಬಲೆ ಹೂಡಿ ಸೂ... ಸೂ... ಚು... ಚು... ಎಂದು ಸದ್ದು ಮಾಡಿದರೂ ಒಂದೂ ಇಲಿಯು ಬಲೆಗೆ ಬೀಳಲಿಲ್ಲ. ಉಳಿದವರು ಮೆದೆಯ ಸುತ್ತ ಕುಕ್ಕರುಗಾಲಲ್ಲಿ ಬಂದೂಕು ಹಿಡಿದು ಕೂರುವ ಸೈನಿಕರಂತೆ ಕೂತಿದ್ದರು. ಬಹಳ ಹೊತ್ತು ಕಾದರೂ ಒಂದು ಇಲಿಯೂ ಬಲೆಯ ಕಡೆ ನುಸುಳಲಿಲ್ಲ. ಥು... ತ್ತೇರಿಕೆ ಎಂದು ನಿರಾಶನಾಗಿ ಬಲೆ ಮಡಿಚಿಕೊಂಡು ಮುಂದೆ ನಡೆದ. ನಾವು ಭಯದಲ್ಲಿ ಕತ್ತಲಲ್ಲಿ ಹಣೆ ಬ್ಯಾಟರಿಗಳನ್ನು ಬಿಟ್ಟುಕೊಂಡು ಅವನ ಹಿಂದೆ ಹೆಜ್ಜೆ ಹಾಕಿದೆವು. ಅಲ್ಲಿಂದ ಒಂದು ಅರ್ಧ ಫರ್ಲಾಂಗು ನಡೆದರೆ ಹುಚ್ಚೀರನ ಮೆದೆ, ಅಲ್ಲಿ 'ಗ್ಯಾರಂಟಿ' ಬೇಟೆ ಎಂದು ತನ್ನ ಸಂಗಡಿಗರನ್ನು ಹುರಿದುಂಬಿಸಿ ಹೆಜ್ಜೆ ಹಾಕಿದ. ಹೋದ ಕೂಡಲೇ ಗೊತ್ತಾಯಿತು. ಇಲಿಗಳು ಕೇಕೆ ಹಾಕಿಕೊಂಡು ಮೆದೆಯ ಒಳಗೂ ಹೊರಗೂ ರಾಗಿಯ ತೆನೆಯನ್ನು ವಿಲಾಸಿಯಿಂದ ಕುರುಕುತ್ತಿದ್ದವು. ಬಹುದಿನಗಳಿಂದ ಹಸಿದಿರುವಂತೆ ಅರ್ಧ ತಿನ್ನುವುದು, ಅರ್ಧ ಉಗುಳುವುದು ಹೀಗೆ ತೆನೆಗಳನ್ನು ಹುತ್ತರಿಸಿ ಬಿಡುತ್ತಿದ್ದವು. ಹೋದವರೆಲ್ಲ 'ಹಿಮದ ಮೇಲೆ ಪಾದ ಇಟ್ಟಂತೆ' ಹೆಚ್ಚು ಸದ್ದು ಮಾಡದೇ ನಿಧಾನಿಸಿ ಬಂದು ಮೆದೆಯ ಕೆಳಗೆ ಬಲೆ ಬೀಸಿದರು. ಮರಿಯ ಒಂದು ಮೂಲೆಯಿಂದ ಬಿದಿರು ಕೋಲಿನಿಂದ ಚುಚ್ಚಿ ಬಲೆ ಹತ್ತಿರ ಬರುವಂತೆ ಮಾಡುತ್ತಿದ್ದ. ಬಲೆಗೆ ಬಂದವುಗಳು ಮುದುರಿದ ಕೂಡಲೇ ಹಿಡಿದಿದ್ದವರು ಒಂದೇ ಏಟಿಗೆ ಅಮುಕಿ ಜೀವ ತೆಗೆಯುತ್ತಿದ್ದರು. ನನಗೆ ಜೀವ ಇರುವ ಇಲಿಗಳ ಬಗ್ಗೆ ಭಯವೇ ಇತ್ತು. ಆದರೂ ಬಲೆಯ ಒಂದು ತುದಿಯನ್ನು ಬಾಡಿನಾಸೆಗೆ ಹಿಡಿದಿದ್ದೆ. ಇಲಿಗಳು ಎಷ್ಟು ಒದರಾಡಿದರೂ ಅರೆಗಳಿಗೆಯಲ್ಲಿ ಹತ್ತಾರು ಇಲಿಗಳು ಆಹುತಿಯಾಗುತ್ತಿದ್ದವು. ಮರಿಯ ಸಣ್ಣನೆ ದನಿಯಲ್ಲಿ ಸೂ ಸು ಸೂ... ಎನ್ನುತ್ತಾ ಎತ್ತೆತ್ತಲೋ ಇದ್ದ ಇಲಿಗಳನ್ನು ಬಲೆಯ ಅಂಚಿಗೆ ಬರುವಂತೆ ತನ್ನ ಹಣೆ ಬ್ಯಾಟರಿಯನ್ನು ಬಿಟ್ಟು ಓಡಿಸುತ್ತಿದ್ದ. ಕೆಲವು ಇಲಿಗಳು ಬ್ಯಾಟರಿಯ ಬೆಳಕಿನ ಕಾಂತಿಗೆ ಹೆದರಿ ಮುಂದಿನ 'ಕಾಲನೆತ್ತಿ ಶರಣಾಗುತ್ತಿರುವ ಸೈನಿಕನಂತೆ' ನಿಲ್ಲುತ್ತಿದ್ದವು. ಅಂಥವುಗಳನ್ನ ಕೈಯಿಂದಲೇ ಹಿಡಿದು ಹೊರಕ್ಕೆ ಎಳೆದು ರಪ್ ಅಂತ ಒಗೆದು ಜೀವ ತೆಗೆಯುತ್ತಿದ್ದ. ಎಳೆದ ಕೋಪಕ್ಕೆ ಇಲಿಗಳು ಕೈಗಳನ್ನು ಕವರಿ ಬಿಡುತ್ತಿದ್ದವು.

ಹೀಗೆ ಬೇಟೆ ಸಾಗುತ್ತಿರಬೇಕಾದರೆ ತನ್ನ ಸಂಗಡಿಗರಲ್ಲಿ ಒಬ್ಬನಾದ ಕರಿಯನೂ ಕೂಡ ಬಂದಿದ್ದ. ಆತ ನಮ್ಮ ವಾರಿಗೆಯವನು. ಅರ್ಧಕ್ಕೆ ಶಾಲೆ ಬಿಟ್ಟು ಕೂಲಿಗೆ ಇಳಿದಿದ್ದ. ಜೊತೆಗೆ ಇಲಿಯ ಬಾಡು ರುಚಿ ಹತ್ತಿಸಿಕೊಂಡಿದ್ದ ತೆವಲುಗಾರ. ಒಮ್ಮೆ ಮರಿಯನು ಕಣದಲ್ಲಿ ಕೆಲಸ ಮಾಡುತ್ತಿರಬೇಕಾದರೆ ಇಲಿಯ ಉಪಜಾತಿಯಾದ 'ತೋಡವು' ಬಗ್ಗಡದ ಗುಂಡಿಯೊಳಗೆ ಬಂದು ಬಿದ್ದಿತು. ಗುಂಡಿ ಅಗೆಯುತ್ತಿದ್ದ ಮರಿಯನು ಅಲ್ಲೇ ಆಟ ಆಡುತ್ತಿದ್ದ ಕರಿಯನಿಗೆ ಇಲಿಯನ್ನು ಸುಟ್ಟು ಉಪ್ಪು ಖಾರ ಹಾಕಿ ಪುಳ್ಳೆ ಸೌದೆಯ ಮೇಲಿಟ್ಟು ಕೊಟ್ಟನು. ಇದರ ರುಚಿಯನ್ನು ಆಸ್ವಾದಿಸಿದ ಕರಿಯ, ಇದರ ರುಚಿಯ ಮುಂದೆ ಇನ್ನೇನಿದೆ ಎಂದು ಭಾವಿಸಿ ಓದಿನ ರುಚಿಗೆ ತಿಲಾಂಜಲಿ ಇಟ್ಟ. ಮರಿಯನ ಅಭಿಮಾನಿ ಆದ. ಇರಲಿ! ಒಂದು ಮೂಲೆಯಲ್ಲಿ ಬಲೆ ಹಿಡಿದು ಕೂತಿದ್ದ ಕರಿಯನ ಪಟಾಪಟಿ ಚಡ್ಡಿಗೆ ಇಲಿಯೊಂದು ನೇರವಾಗಿ ನುಸುಳಿತು. ಕಾರಣ, ಮರಿಯ ಅತ್ತ ಕಡೆಯಿಂದ ಕಡ್ಡಿಯಿಂದ ಓಡಿಸುತ್ತಿರುವಾಗ ದಿಕ್ಕಾಪಾಲಾಗಿ